1	2	3
24.	ನಂಗಾರು ಕುಟುಂಬ ಇರುವ ನೈಸರ್ಗಿಕ ಯೋಜನೆ ಪೈಪ್	0.500
25.	ಅರ್ವತ್ತೊಕ್ಲು ಗ್ರಾಮದ ಜಾನಕಿ ಮನೆ ಹತ್ತಿರ ತೆರೆದ ಬಾವಿ ನಿರ್ಮಾಣ	0.500
26.	ಪೇರೂರಿನಿಂದ ಅಪ್ಪನೆರವಂಡ ಕುಟುಂಬಸ್ಥರಿಗೆ ನೈಸರ್ಗಿಕ ನೀರು ಸರಬರಾಜು ಯೋಜನೆ	1.000
27.	ಇತರೆ	1.000
	ಒಟ್ಟು ಮುಗಿದಿರುವ ಕಾಮಗಾರಿಗಳ ಸಂಖ್ಯೆ –26.	

367(523) ಶ್ರೀ ಬೋಪಯ್ಯ ಕೆ.ಜಿ. (ಮಡಿಕೇರಿ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೊಡಗು ಜಿಲ್ಲೆಯ ಕೂಡಿಗೆ ಕೃಷಿ ಇಲಾಖೆಯಲ್ಲಿ ಶೇಖರಿಸಿಟ್ಟ ಭತ್ತದ ಬೆಳೆ ನಾಶವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ರೀತಿ ನಾಶವಾಗಲು ಕಾರಣವೇನು;

ಇ) ಭತ್ತದ ಬೆಳೆ ನಾಶವಾಗಿರುವುದರಿಂದ ಪರಿಹಾರ ವಿತರಣೆ ಮಾಡಲಾಗಿದೆಯೇ (ವಿವರ ನೀಡುವುದು)?

ಶ್ರೀ ಬಂಡಪ್ಪ ಕಾಶಂಪೂರ್ (ಕೃಷಿ ಸಚಿವರು)

ಅ) ಬಂದಿದೆ.

ಆ) ಮಾರ್ಚ್ 2006ರ ಮಾಹೆಯ 1 ಮತ್ತು 2ನೇ ವಾರದಲ್ಲಿ ಬಿದ್ದ ಆಕಸ್ಮಿಕ ಮಳೆಯಿಂದ ಹಾಗೂ ಬಿರುಗಾಳಿಯಿಂದ ಕೂಡಿಗೆ ಫಾರಂನಲ್ಲಿ ಶೇಖರಿಸಿ ಇಟ್ಟಿದ್ದ ಭತ್ತದ ಮೆದೆಯಲ್ಲಿ ಅಂದಾಜು 50 ಕ್ವಿಂಟಾಲ್ ಭತ್ತ ನಷ್ಟವಾಗುವ ಸಾಧ್ಯತೆ ಇದೆ. ಭತ್ತದ ಮೆದೆಗೆ ಸೂಕ್ತವಾದ ಟಾರ್‌ಪಾಲ್‌ಗಳು ಮತ್ತು ಪ್ಲಾಸ್ಟಿಕ್ ಶೀಟ್‌ಗಳನ್ನು ಹೊದಿಸಿದ್ದರೂ ಸಹ ದಿನಾಂಕ: 4–3–2006ರಂದು ಬಂದ ಬಿರುಗಾಳಿಯಿಂದ ಟಾರ್‌ಪಾಲ್ ಶೀಟ್ ಹಾರಿಹೋಗುವುದನ್ನು ತಡೆಗಟ್ಟಲಾಗಲಿಲ್ಲ. ದಿನಾಂಕ: 5–3–2006 ರಿಂದ 10–3–2006ರವರೆಗೆ 56.70 ಮೀ.ಮೀ. ಮಳೆಯಾಗಿರುತ್ತದೆ. ಇದು ಪ್ರಕೃತಿ ವಿಕೋಪ ಮಳೆಯೆಂದು ಪರಿಗಣಿಸಲಾಗಿದೆ.

ಇ) ಬರ ಪರಹಾರ ಮಾರ್ಗಸೂಚಿಯಡಿಯಲ್ಲಿ ಸದರಿ ವಿಷಯದ ಬಗ್ಗೆ ಪರಿಶೀಲಿಸಲಾಗುತ್ತಿದೆ.

368(524) ಶ್ರೀ ಬೋಪಯ್ಯ (ಮಡಿಕೇರಿ) : ಮಾನ್ಯ ಮೀನುಗಾರಿಕೆ, ಮುಜರಾಯಿ ಹಾಗೂ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಡಿಕೇರಿ ನಗರದ ರಾಜರ ಗದ್ದಿಗೆಗೆ ಸಂಬಂಧಪಟ್ಟಂತೆ ಇರುವ ಜಾಗದ ವಿಸ್ತೀರ್ಣವೆಷ್ಟು;